11

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 385 |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಅರವಿಂದ ಕುಮಾರ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.12.2022 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಏಕೈಕ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 2020-21ರಲ್ಲಿ 32 ಕೋಟಿ ಹಣ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಈ ಬಗ್ಗೆ ಅಕ್ಟೋಬರ್ 2021 ರಲ್ಲಿ ಅಪರಾಧ ಸಂಖ್ಯೆ 07/2021 ಪ್ರಕರಣ ದಾಖಲಾಗಿದ್ದು, ಹಣಕಾಸು ನಿಯಂತ್ರಣ ಅಧಿಕಾರಿಗಳು ಮತ್ತು ಇತರರು (ನಿವೃತ್ತ) ಇವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಈ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ; | ಸದರಿ ಭ್ರಷ್ಟಾಚಾರ ಪ್ರಕರಣದಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಆರೋಪ ಕುರಿತು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 04 ಪಲಅಸೇ 2021, ಬೆಂಗಳೂರು, ದಿನಾಂಕ 23-07-2021 ರನ್ವಯ ತನಿಖೆ/ವಿಚಾರಣೆ ಕೈಗೊಳ್ಳಲು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 17(a) ರಡಿ ಸರ್ಕಾರದ ಪೂರ್ವಾನುಮತಿ ನೀಡಿ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಿ ಆದೇಶಿಸಲಾಗಿರುತ್ತದೆ. ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ ಬೀದರ ಇವರು FIR ಕ್ರೈಮ್ ಸಂಖ್ಯೆ: 07/2021 ರಂತೆ ದಿನಾಂಕ: 04.10.2021 ರಂದು ಭ್ರಷ್ಟಾಚಾರದ ಪ್ರಕರಣ ದಾಖಲಾಗಿದ್ದು ಪ್ರಸ್ತುತ ಪ್ರಕರಣವು ಲೋಕಾಯುಕ್ತ ಬೀದರ ಇವರಿಗೆ ವರ್ಗಾವಣೆಯಾಗಿರುತ್ತದೆ. (ಪತ್ರ ಸಂಖ್ಯೆ:ಪೊಉ/ಎಸಿಬಿ/ಪ್ರಭಾರ/ಬೀ/2022 ದಿನಾಂಕ: 11.10.2022) ಲೋಕಾಯುಕ್ತ, ಬೀದರ್ ಇವರಿಂದ ತನಿಖೆ ಪ್ರಗತಿಯಲ್ಲಿರುತ್ತದೆ. |
| ಇ) | ಎಫ್.ಐ.ಆರ್. ದಾಖಲಾದ ಆರೋಪಿಗಳು ಈಗಲೂ ಪಶುವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯದ ಮೇಲಿದ್ದು ಇವರನ್ನು ಸರ್ಕಾರ ಬಂಧಿಸದಿರಲು ಕಾರಣವೇನು? | ಭ್ರಷ್ಟಾಚಾರ ನಿಗ್ರಹ ದಳದಲ್ಲಿ ದಾಖಲಾಗಿರುವ FIR ನಲ್ಲಿ (ಪ್ರಸ್ತುತ ಲೋಕಾಯುಕ್ತ, ಬೀದರ್ ಇಲ್ಲಿಗೆ ವರ್ಗಾವಣೆಯಾಗಿರುವ) ಹೆಸರಿಸಿರುವ ಆರೋಪಿಗಳು ವಿಶ್ವವಿದ್ಯಾಲಯದ ನೌಕರರುಗಳಾಗಿರುತ್ತಾರೆ. ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಸದರಿ ನೌಕರರುಗಳ ವಿರುದ್ಧ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.<br><br>ಶ್ರೀ ಮೃತ್ಯುಂಜಯ, ಹಿರಿಯ ಸಹಾಯಕ ಇವರ ಮನೆ ಮೇಲೆ ಭ್ರಷ್ಟಾಚಾರ ನಿಗ್ರಹ ದಳದವರು ದಿನಾಂಕ:16-06-2022ರಂದು ದಾಳಿ ಮಾಡಿ ಅಕ್ರಮ ಆಸ್ತಿ ಸಂಪಾದನೆ |

..2

| | | |
|---|---|---|
| | | ಮಾಡಿರುವ ಬಗ್ಗೆ ವಿಶ್ವವಿದ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಅದರಂತೆ ದಿನಾಂಕ:21-06-2022ರಂದು ವಿಶ್ವವಿದ್ಯಾಲಯವು ಅಕ್ರಮ ಆಸ್ತಿ ಸಂಪಾದನೆ ಹಾಗೂ ಭ್ರಷ್ಟಾಚಾರ ಆರೋಪಕ್ಕೆ ಗುರಿಯಾದ ಶ್ರೀ. ಮೃತ್ಯುಂಜಯ, ಹಿರಿಯ ಸಹಾಯಕ ಇವರನ್ನು ಆದೇಶ ಸಂಖ್ಯೆ: ಕುಸ/ಮೃತ್ಯುಂಜಯ/ಹಿಸಾ/ಅಮಾನತ್ತು/ಎಸಿಬಿ/2022-23/363-ಐ ದಿನಾಂಕ: 21.06.2022 ರಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿದೆ.<br><br>ವಿಶ್ವವಿದ್ಯಾಲಯವು ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿ ಅಮಾನತ್ತಾದ ಶ್ರೀ ಮೃತ್ಯುಂಜಯ, ಹಿರಿಯ ಸಹಾಯಕ ಇವರನ್ನು ವಿಚಾರಣೆ ನಡೆಸಲು ಶಿಸ್ತು ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ.<br><br>ಮುಂದುವರೆದು, ಸದರಿ ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಗುತ್ತಿಗೆ ನೌಕರರಾದ ಶ್ರೀ.ಸುನೀಲಕುಮಾರ ಪಾಟೀಲ, ಶ್ರೀ ಗುಂಡಪ್ಪ ಸಾಧು, ಶ್ರೀ ನಾಗಶೆಟ್ಟಿ ಬಿಕ್ಲೆ, ಶ್ರೀ ಶಿವಕುಮಾರ, ಶ್ರೀ ಸುಧೀರ ಹಾಗೂ ಶ್ರೀ ಆಕಾಶ ಮೇತ್ರೆ ಇವರನ್ನು ವಿಶ್ವವಿದ್ಯಾಲಯದ ಕಛೇರಿಯಿಂದ ವಜಾ ಮಾಡಲಾಗಿದೆ.<br><br>ಲೋಕಾಯುಕ್ತ, ಬೀದರ್ ಇವರಿಂದ ತನಿಖೆ ಪ್ರಗತಿಯಲ್ಲಿದ್ದು, ಸದರಿ ವಿಚಾರಣೆಯ ವರದಿ ಬಂದ ನಂತರ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು. |

**ಸಂಖ್ಯೆ: ಪಸಂಮೀ ಇ-334 ಪಅಸೇ 2022**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**